# ಕೊಡಗಿನ ಚೆಲುವೆಯರು..

ಕೊಡಗಿನ ಜಲಪಾತಗಳ ದರ್ಶನವೆಂದರೆ ಕಾಫಿ ತೋಟಗಳ ನಡುವಣ ಕಾಲ್ನಡಿಗೆಯ ಯಾನವೂ ಹೌದು. ಹಸಿರುಕ್ಕುವ ಪ್ರಕೃತಿಯ ಧ್ಯಾನವೂ ಹೌದು.

■ ಆದಿತ್ಯ ಕೆ.ಎ.



ಚೇಲಾವರ

ಬೆಟ್ಟಗುಡ್ಡಗಳ ಮೇಲೆ ಸುರಿಯುವ ಮಳೆಗೆ ಕೊಡಗಿನ ಚೆಲುವೆಯರು ಜೀವಕಳೆ ತುಂಬಿಕೊಂಡಿದ್ದಾರೆ. ಮಳೆಗಾಲದ ಹೊತ್ತಿನಲ್ಲಿ ಚೈತನ್ಯ ತುಂಬಿಕೊಂಡು ವೈಯಾರ ಬೀರುತ್ತ ಬಂಡೆಕಲ್ಲುಗಳ ಮಧ್ಯೆ ಧುಮ್ಮಿಕ್ಕುವ ಕೊಡಗು ಜಿಲ್ಲೆಯ ಜಲಪಾತಗಳನ್ನು ಕಣ್ತುಂಬಿಕೊಳ್ಳುವುದೇ ಒಂದು ಸೊಬಗು.

ಈ ಬಾರಿ ಪಶ್ಚಿಮಘಟ್ಟದ ಗಿರಿಶ್ರೇಣಿಗಳಲ್ಲಿ ವರುಣ ಅಬ್ಬರಿಸದಿದ್ದರೂ ಇಲ್ಲಿನ ಜಲಪಾತಗಳು ಪ್ರವಾಸಿಗರಿಗೇನೂ ನಿರಾಸೆ ಮೂಡಿಸುತ್ತಿಲ್ಲ. ಆಗೊಮ್ಮೆ ಈಗೊಮ್ಮೆ ಬೀಳುವ ಜೋರು ಮಳೆ ಹಾಗೂ ಜಲ ಮೂಲಗಳಿಂದ ಕಾಫಿ ತೋಟಗಳ ಹಸಿರು ರಾಶಿಯ ಮಧ್ಯೆ ಹಾಲ್ನೊರೆಯಾಗಿ ಜಲಪಾತಗಳು ಭೋರ್ಗರೆಯುತ್ತಿವೆ.

ಮಳೆಗಾಲದಲ್ಲಿ ಕೊಡಗಿನ ಯಾವ ರಸ್ತೆಯಲ್ಲಿ ಸಾಗಿದರೂ 'ಜಲಧಾರೆಗಳ ದರ್ಶನ'ವಾಗಲಿದೆ. ಮಡಿಕೇರಿ ತಾಲ್ಲೂಕಿನ ಅಬ್ಬಿ ಫಾಲ್ಸ್, ವಿರಾಜಪೇಟೆಯ ಇರ್ಪು ಫಾಲ್ಸ್, ಮಡಿಕೇರಿ ತಾಲ್ಲೂಕು ನಾಪೋಕ್ಲು ಬಳಿಯ ಚೇಲಾವರ ಫಾಲ್ಸ್, ಸೋಮವಾರಪೇಟೆಯ ಮಲ್ಲಳ್ಳಿ ಫಾಲ್ಸ್ – ಎಲ್ಲವೂ ಜಿಲ್ಲೆಯ ಪ್ರಮುಖ ಆಕರ್ಷಣೀಯ ಜಲಪಾತಗಳು. ಈ ಜಲಪಾತಗಳು ಹಾಲ್ನೊರೆಯಾಗಿ ಭೋರ್ಗರೆಯುವ ನಿಸರ್ಗದತ್ತವಾದ ಸೌಂದರ್ಯವನ್ನು ನೋಡುವುದು ಕಣ್ಣಿಗೆ ಹಬ್ಬ. ಜಿಲ್ಲೆಯ ಬೆಟ್ಟದ ಸಾಲಿನಲ್ಲಿ ಇವಿಷ್ಟೇ ಅಲ್ಲ; ಅನಾಮಧೇಯವಾಗಿ ಉಳಿದಿರುವ ನೂರಾರು ಜಲಪಾತಗಳಿವೆ. ಅವುಗಳು ಕಾಫಿತೋಟಗಳ ನಡುವೆ ಮಳೆಗಾಲದಲ್ಲಿ ಮೈದುಂಬಿಕೊಳ್ಳುತ್ತವೆ. ಆದರೆ, ಖಾಸಗಿ ಜಾಗವಾದ ಕಾರಣಕ್ಕೆ ಪ್ರವಾಸಿಗರಿಗೆ ನೋಡಲು ಸಾಧ್ಯವಾಗುವುದಿಲ್ಲ!

### ಅಬ್ಬಾ.. ಅಬ್ಬಿ..!

ಕೊಡಗು ಜಿಲ್ಲೆಯ ಪ್ರವಾಸದ ಬಗ್ಗೆ ಯೋಚಿಸಿದ್ದರೆ ಮೊದಲು ಅಬ್ಬಿ ಜಲಪಾತ ವೀಕ್ಷಿಸುವ ಯೋಜನೆ ಹಾಕಿಕೊಳ್ಳಬಹುದು. ಏಕೆಂದರೆ ಇದು ಮಡಿಕೇರಿ ನಗರದಿಂದ ಕೇವಲ 6 ಕಿ.ಮೀ. ಅಂತರದಲ್ಲಿದೆ. ಖಾಸಗಿ ವಾಹನದಲ್ಲಿ ಬಂದರೆ ಫಾಲ್ಸ್ ಸಮೀಪದ ಕೆ. ನಿಡುಗಣೆ ತನಕ ತೆರಳಬಹುದು. ಬಸ್ ಸೇವೆ ಇಲ್ಲ; ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬಂದರೆ ಮಡಿಕೇರಿ ಬಸ್ ನಿಲ್ದಾಣದ ಸಮೀಪ ಖಾಸಗಿ ವಾಹನಗಳು ಬಾಡಿಗೆಗೆ ಸಿಗಲಿವೆ.

ಕಾಫಿ ತೋಟದ ಮಧ್ಯೆ ಕಲ್ಲು ಮೆಟ್ಟಿಲುಗಳನ್ನು ಇಳಿದು ಸಾಗಿದರೆ ಅಬ್ಬಿಯ ದರ್ಶನವಾಗುತ್ತದೆ. ಮಳೆಗಾಲದಲ್ಲಿ ಬರುವ ಕಾರಣಕ್ಕೆ ಎಚ್ಚರಿಕೆ ವಹಿಸುವುದು ಅಗತ್ಯ. ಕಲ್ಲಿನ ಮೇಲೆ ಪಾಚಿ ನಿಮ್ಮನ್ನು ಪೇಚಿಗೆ ಸಿಲುಕಿಸುವ ಸಾಧ್ಯತೆಯಿದೆ. ಎಲ್ಲವನ್ನೂ ದಾಟಿ ಮುಂದೆ ತೆರಳಿದರೆ 80 ಅಡಿ ಎತ್ತರದಿಂದ ಕರಿಬಂಡೆಗಳ ಮೇಲಿಂದ ಧುಮ್ಮಿಕ್ಕುವ ಜಲಪಾತದ ಸೊಬಗು ಮನಸ್ಸಿಗೆ ಮುದ ನೀಡುತ್ತದೆ. ಮಡಿಕೇರಿ ಸುತ್ತಮುತ್ತ ಜೋರು ಮಳೆಯಾದರೆ ಈ ಜಲಪಾತ ಭೋರ್ಗರೆಯುತ್ತದೆ.

ಅಬ್ಬಿ ಜಲಪಾತಕ್ಕೆ ಹಲವು ದಶಕಗಳ ಇತಿಹಾಸವಿದ್ದರೂ ಮೂಲಸೌಕರ್ಯ ಕೊರತೆ ಇಂದಿಗೂ ಕಾಡುತ್ತಿದೆ. ಫಾಲ್ಸ್ ವೀಕ್ಷಣೆಗೆಂದು ನಿರ್ಮಿಸಿದ್ದ ತೂಗುಸೇತುವೆಯ ಗೇಟ್‌ಗೆ ಬೀಗಬಿದ್ದು ಹಲವು ವರ್ಷಗಳೇ ಆಗಿವೆ. ತೂಗುಸೇತುವೆ ಮೇಲೆ ನಿಂತು ಜಲಪಾತದಿಂದ ಚಿಮ್ಮುವ ನೀರ ಹನಿಗಳ ಸಿಂಚನದಿಂದ ಮುದಗೊಳ್ಳುವ ಅವಕಾಶ ಪ್ರವಾಸಿಗರಿಗೆ ಇಲ್ಲವಾಗಿದೆ. ನೂತನ ತೂಗುಸೇತುವೆ, ರಸ್ತೆ, ವೀಕ್ಷಣಾ ಗೋಪುರ ನಿರ್ಮಾಣಕ್ಕೆ ಮೂರು ತಿಂಗಳ ಹಿಂದೆ ಚಾಲನೆ ಸಿಕ್ಕಿತ್ತು. ಆದರೆ, ಕಾಮಗಾರಿ ಪ್ರಾರಂಭಗೊಂಡಿಲ್ಲ. ಇನ್ನು ಅಬ್ಬಿಫಾಲ್ಸ್‌ಗೆ ಮಡಿಕೇರಿಯ ಕೊಳಚೆ ನೀರು ಸೇರಿಕೊಳ್ಳುತ್ತಿದ್ದು ಇದನ್ನು ತಪ್ಪಿಸಬೇಕಿದೆ.

### ಚೇಲಾವರದ ಚೆಲುವು

ಮಡಿಕೇರಿ ತಾಲ್ಲೂಕಿನಲ್ಲಿರುವ ಮತ್ತೊಂದು ಪ್ರಮುಖ ಜಲಪಾತ ಚೇಲಾವರ. ಮಡಿಕೇರಿಯಿಂದ ಚೆಯ್ಯಂಡಾಣೆಗೆ ತೆರಳಿ, ಅಲ್ಲಿಂದ 5 ಕಿ.ಮೀ. ನಿಸರ್ಗದ ನಡುವೆ ಸಾಗಿದರೆ ಈ ಅಪೂರ್ವ ಜಲಧಾರೆ ಗೋಚರಿಸುತ್ತದೆ. 'ಕಾನನ ಸುಂದರಿ' ಎಂದು ಚೇಲಾವರ ಪ್ರಸಿದ್ಧಿ ಪಡೆದಿದೆ. ಜಿಲ್ಲೆಯ ಪ್ರಮುಖ ಫಾಲ್ಸ್‌ಗಳಲ್ಲಿ ಒಂದಾದ ಚೇಲಾವರ ಮಳೆಗಾಲದಲ್ಲಿ ಮೈದುಂಬಿ ಭೋರ್ಗರೆಯುವಾಗ ನೋಡುವುದೇ ಸೊಬಗು.

**ಅಬ್ಬಿ ಜಲಪಾತ**

ಮಡಿಕೇರಿಯಿಂದ 6 ಕಿ.ಮೀ.
ತೆರಳಲು ಆಟೊ ರಿಕ್ಷಾ ಅಥವಾ ಬಾಡಿಗೆ ವಾಹನ ಆಶ್ರಯಿಸಬೇಕು

**ಚೇಲಾವರ ಜಲಪಾತ**

ಮಡಿಕೇರಿಯಿಂದ 30 ಕಿ.ಮೀ., ವಿರಾಜಪೇಟೆ ಮಾರ್ಗದಿಂದ 26 ಕಿ.ಮೀ. (ನಾಪೋಕ್ಲು ಸಮೀಪ)
ದಿನದಲ್ಲಿ ಒಮ್ಮೆ ಮಾತ್ರ ಖಾಸಗಿ ಬಸ್ ಸೇವೆಯಿದೆ
ಸ್ವಂತ ವಾಹನದಲ್ಲಿ ತೆರಳುವುದೇ ಸೂಕ್ತ

**ಇರ್ಪು ಜಲಪಾತ**

ಮಡಿಕೇರಿಯಿಂದ 90 ಕಿ.ಮೀ., ಗೋಣಿಕೊಪ್ಪಲಿನಿಂದ 42 ಕಿ.ಮೀ.
ಖಾಸಗಿ ಬಸ್‌ಗಳು ಲಭ್ಯ ಇವೆ
ಖಾಸಗಿ ವಾಹನದಲ್ಲಿ ತೆರಳಿದರೆ ಅನುಕೂಲ

**ಮಲ್ಲಳ್ಳಿ ಜಲಪಾತ**

ಸೋಮವಾರಪೇಟೆಯಿಂದ 24 ಕಿ.ಮೀ.
ಬಸ್ ಸೇವೆ ಇಲ್ಲ
ಖಾಸಗಿ ವಾಹನಗಳಲ್ಲಿ ಹೋಗಬೇಕು